ಕಾರ್ಯನಿರ್ವಾಹಕ ಅಭಿಯಂತರರವರ ಕಚೇರಿ
ರಾಷ್ಟ್ರೀಯ ಹೆದ್ದಾರಿ ವಿಭಾಗ,
ತುಮಕೂರು.

ಕರ್ನಾಟಕ ಸರ್ಕಾರ

Office of the Executive Engineer
National Highways Division,
PWD Compound, Kunigal road
TUMKUR-572102
P.No-0816-2272776
e mail: eenhtmk@gmail.com

ಸಂಖ್ಯೆ:ಕಾಇಂ/ರಾಹೆವಿ/ತುಮ/ಸ.ಇಂ/ಹೊರಗುತ್ತಿಗೆ/2024-25/ 813 ದಿನಾಂಕ:10-12-2024

## ಕಛೇರಿಯ ನಡವಳಿ

ವಿಷಯ :- ಹೊರಗುತ್ತಿಗೆ ಮೇಲೆ ಮಾನವ ಸಂಪನ್ಮೂಲವನ್ನು ಟೆಂಡರ್ ಮುಖಾಂತರ ಪಡೆದುಕೊಳ್ಳುವ ಬಗ್ಗೆ.

ಉಲ್ಲೇಖ:- 1) ಸರಕಾರದ ಆದೇಶ ಸಂಖ್ಯೆ:ಲೋಇ:347:ಸೇಸೆ:2022,ಬೆಂಗಳೂರು,ದಿನಾಂಕ: 09.08.2023.

2) ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿಗಳು, ಬೆಂಗಳೂರು ಇವರ ಕಛೇರಿ ಪತ್ರ ಸಂಖ್ಯೆ ರಾಹೆ:ತಾಂ.ಸ3:ಇಇ4::ಹೊರಗುತ್ತಿಗೆ:2024-25:1624,ದಿನಾಂಕ: 1.10.2024

3) ಈ ಕಛೇರಿ ಅಧಿಸೂಚನೆ ಸಂಖ್ಯೆ:EE/NHD/tmk/Outsource staff/NIT/ 2024-25/02,680, Date:04.11.2024.

ಪ್ರಸ್ತಾವನೆ:

ರಾಷ್ಟ್ರೀಯ ಹೆದ್ದಾರಿ ವೃತ್ತ , ಬೆಂಗಳೂರು, ರಾಷ್ಟ್ರೀಯ ಹೆದ್ದಾರಿ ವಿಭಾಗ ತುಮಕೂರು ಹಾಗೂ ಉಪ ವಿಭಾಗ ಕಛೇರಿಗಳಿಗೆ ಕಂಪ್ಯೂಟರ್ ಆಪರೇಟರ್/ಬೆರಳಚ್ಚುಗಾರರು, ವಾಹನ ಚಾಲಕರು ಹಾಗೂ ಗ್ರೂಪ್ 'ಡಿ' ನೌಕರರನ್ನು ಹೊರಗುತ್ತಿಗೆ ಆಧಾರದಲ್ಲಿ ದಿನಾಂಕ: 01.04.2024 ರಿಂದ 31.03.2025ರ ಅವಧಿಗೆ ತಿಂಗಳೊಂದರ ಸೇವಾದರ ನಮೂದಿಸಲು ಸ್ಪರ್ಧಾತ್ಮಕ ದರಗಳನ್ನು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ ಸಿಪಿಪಿ ಪೋರ್ಟಲ್ ಮೂಲಕ ಏಕ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಮುಖಾಂತರ ಉಲ್ಲೇಖ (3)ರ ದಿನಾಂಕ: 04.11.2024 ರಂದು ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

| | | | | |
|---|---|---|---|---|
| 1) | ಟೆಂಡರ್ ಪ್ರಕಟಣೆ | :EE/NHD/tmk/Outsource staff/NIT/ 2024-25/02,680, Date:04.11.2024. | | |
| 2) | ಟೆಂಡರ್‌ಗಿಟ್ಟ ಮೊತ್ತ | ರೂ.36,42,080/- | | |
| 3) | ಪಡೆಯಲು ಬಯಸುವ ಸೇವೆಗಳ ವಿವರ ಮತ್ತು ಸಂಖ್ಯೆ | 1 | ಕಂಪ್ಯೂಟರ್‌ಆಪರೇಟರ್/ ಬೆರಳಚ್ಚುಗಾರರು | 4 ಸಂಖ್ಯೆ |
| | | 2 | ಗ್ರೂಪ್ ಡಿ ನೌಕರರು | 2 ಸಂಖ್ಯೆ |
| | | 3 | ವಾಹನ ಚಾಲಕರು | 3 ಸಂಖ್ಯೆ |
| 4) | ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ | ದಿನಾಂಕ: 04.11.2024 ರಿಂದ 19.11.2024 ಸಂಜೆ 4.00 ಗಂಟೆಯವರೆಗೆ | | |
| 5) | ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪ್ರಸ್ತಾವನೆ ಸಲ್ಲಿಸುವ ಕೊನೆಯ ದಿನಾಂಕ ವೇಳೆ | ದಿನಾಂಕ: 19.11.2024 ಅಪರಾಹ್ನ 4.00 ಗಂಟೆ | | |
| 6) | ಟೆಂಡರ್ ತೆರೆಯುವ ದಿನಾಂಕ | ದಿನಾಂಕ: 20-11-2024 ಅಪರಾಹ್ನ 4.30 ಗಂಟೆ | | |
| 7) | ಟೆಂಡರ್‌ನಲ್ಲಿರುವ ಸಂಸ್ಥೆಗಳು ಪಾವತಿಸಬೇಕಾದ ಇ.ಎಂ.ಡಿ. | ರೂ.72,482/- | | |
| 8) | ಟೆಂಡರ್ ಡಾಕ್ಯೂಮೆಂಟ್ ಫೀ (ರೂ) | 2000.00 | | |

ಮೇಲ್ಕಂಡ ಟೆಂಡರ್ ಪ್ರಕಟಣೆಗೆ ಪ್ರತಿಕ್ರಿಯಿಸಿ ಈ ಕೆಳಕಂಡ ನಾಲ್ಕು ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಹೊರಗುತ್ತಿಗೆ ಸಂಸ್ಥೆ ವತಿಯಿಂದ ಸೆಂಟ್ರಲ್ ಪ್ರೊಕ್ಯೂರ್ ಮೆಂಟ್ ಪೋರ್ಟ್‌ಲ್ ನಲ್ಲಿ ಸೇವಾ ದರ ಟೆಂಡರ್ ಸಲ್ಲಿಕೆಯಾಗಿರುತ್ತದೆ.

1) ಸೆಟ್ ಪ್ಲ್ಯಾನ್ ಕನ್ಸಲ್ಟೆನ್ಸಿ ಸರ್ವೀಸಸ್ ಪ್ರೈ.ಲಿ,ಬೆಂಗಳೂರು
2) ಶ್ರೀ ಉಮಾಶಂಕರ್, ಜೀಯಸ್ ಕಂಪ್ಯೂಟರ್ಸ್ , ಬೆಂಗಳೂರು
3) ಅರ್ಪಿತ ಇನ್‌ಫ್ರಾಸ್ಟ್ರಕ್ಚರ್,
4) ಇಂಡಿಯನ್ ಇನ್ನೋಟೆಕ್

ಮೇಲ್ಕಂಡ ಏಜೆನ್ಸಿಯಲ್ಲಿ , 3. ಅರ್ಪಿತ ಇನ್‌ಫ್ರಾಸ್ಟ್ರಕ್ಚರ್ ಮತ್ತು 4. ಇಂಡಿಯನ್ ಇನ್ನೋಟೆಕ್ ರವರು ನಿಗದಿತ ಸಮಯದಲ್ಲಿ ಇ.ಎಂ.ಡಿ ಮೂಲ ಪ್ರತಿಯನ್ನಾಗಲೀ, ಇತರೆ ದಾಖಲಾತಿಗಳನ್ನಾಗಲೀ ಸಲ್ಲಿಸದಿದ್ದ ಕಾರಣ ಸದರಿರವರ ಬಿಡ್‌ಗಳನ್ನು ತಿರಸ್ಕರಿಸಲಾಗಿರುತ್ತದೆ. ಹಾಗೂ ದಿನಾಂಕ: 20.11.2024 ರಂದು ಈ ಕೆಳಗಿನ 2 ಏಜೆನ್ಸಿಯವರ ಬಿಡ್‌ಗಳನ್ನು ತೆರೆಯಲಾಗಿರುತ್ತದೆ.

1. ಸೆಟ್ ಪ್ಲ್ಯಾನ್ ಕನ್ಸಲ್ಟೆನ್ಸಿ ಸರ್ವೀಸಸ್ ಪ್ರೈ.ಲಿ,ಬೆಂಗಳೂರು
5) ಶ್ರೀ ಉಮಾಶಂಕರ್, ಜೀಯಸ್ ಕಂಪ್ಯೂಟರ್ಸ್ , ಬೆಂಗಳೂರು

ಮೇಲಿನ ಇಬ್ಬರು ಏಜೆನ್ಸಿಯವರು ವಿಭಾಗ ಕಚೇರಿಗೆ ನಿಗಧಿತ ಮೊತ್ತದ ಇ.ಎಂ.ಡಿ ಮತ್ತು ಟೆಂಡರ್ ಡಾಕ್ಯೂಮೆಂಟ್ ಶುಲ್ಕದ ಮೂಲ ಪ್ರತಿಗಳನ್ನು ವಿಭಾಗ ಕಛೇರಿಗೆ ಸಲ್ಲಿಸಿರುತ್ತಾರೆ. ಅದರಂತೆ ಬಿಡ್ಡುದಾರರ ತಾಂತ್ರಿಕ ದಾಖಲೆಗಳನ್ನು ತೆರೆಯಲಾಗಿದ್ದು.ಈ ಇಬ್ಬರು ಬಿಡ್ಡುದಾರರು ಅಪ್ಲೋಡ್ ಮಾಡಿದ ದಾಖಲೆಗಳನ್ನು, ನಿಗಧಿತ ಷರತ್ತುಗಳು ಮತ್ತು ಮಾನದಂಡಗಳೊಂದಿಗೆ ಪರಿಶೀಲಿಸಿ ತಾಂತ್ರಿಕ ಮೌಲ್ಯಮಾಪನ ತಖ್ತೆಯನ್ನು ತಯಾರಿಸಿ ಪ್ರತ್ಯೇಕವಾಗಿ ಅಡಕಗೊಳಿಸಲಾಗಿದೆ. ತಾಂತ್ರಿಕ ಮೌಲ್ಯಮಾಪನದ ಅನುಸಾರ 1 . ಸೆಟ್ ಪ್ಲ್ಯಾನ್ ಕನ್ಸಲ್ಟೆನ್ಸಿ ಸರ್ವೀಸಸ್ ಪ್ರೈ.ಲಿ,ಬೆಂಗಳೂರು, 2. ಶ್ರೀ ಕೆ. ಉಮಾಶಂಕರ್, ಜೀಯಸ್ ಕಂಪ್ಯೂಟರ್ಸ್ , ಬೆಂಗಳೂರು ಇವರ ಬಿಡ್ ಸ್ಪರ್ಧಾತ್ಮಕವಾಗಿರುತ್ತದೆ.

ಬಿಡ್ ದಾರರು ಸಲ್ಲಿಸಿರುವ ಸೇವಾ ದರದ ವಿವರಗಳು ಈ ಕೆಳಕಂಡಂತ್ತಿರುತ್ತದೆ.

| ಕ್ರಸಂ | ಬಿಡ್ ದಾರರ ಹೆಸರು | ನಮೂದಿಸಿರುವ ಸೇವಾ ದರ (ಶೇಖಡಾವಾರು) |
|---|---|---|
| 1 | ಸೆಟ್ ಪ್ಲ್ಯಾನ್ ಕನ್ಸಲ್ಟೆನ್ಸಿ ಸರ್ವೀಸಸ್ ಪ್ರೈ.ಲಿ,ಬೆಂಗಳೂರು, | (+) 1.00% |
| 2 | ಶ್ರೀ ಕೆ. ಉಮಾಶಂಕರ್, ಜೀಯಸ್ ಕಂಪ್ಯೂಟರ್ಸ್ , ಬೆಂಗಳೂರು | (+) 10.00% |

ಮೆ. ಸೆಟ್ ಪ್ಲ್ಯಾನ್ ಕನ್ಸಲ್ಟೆನ್ಸಿ ಸರ್ವೀಸಸ್ ಪ್ರೈ.ಲಿ,ಬೆಂಗಳೂರುರವರು ಶೇಕಡಾ 1.00% ಹೆಚ್ಚುವರಿ ಸೇವಾ ದರವನ್ನು ನಮೂದಿಸಿರುತ್ತಾರೆ. ಆದ್ದರಿಂದ ಸೆಟ್ ಪ್ಲ್ಯಾನ್ ಕನ್ಸಲ್ಟೆನ್ಸಿ ಸರ್ವೀಸಸ್ ಪ್ರೈ.ಲಿ, ಬೆಂಗಳೂರು, ಇವರ ಬಿಡ್ ಸ್ಪರ್ಧಾತ್ಮಕವಾಗಿದ್ದು ಸದರಿಯವರ ಸೇವಾ ಟೆಂಡರ್‌ನ್ನು ಅಂಗೀಕರಿಸಲು ಪರಿಗಣಿಸಿದೆ.

## ಆದೇಶ

ಮೇಲೆ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ರಾಷ್ಟ್ರೀಯ ಹೆದ್ದಾರಿ ವೃತ್ತ,ಬೆಂಗಳೂರು, ರಾಷ್ಟ್ರೀಯ ಹೆದ್ದಾರಿ ವಿಭಾಗ, ತುಮಕೂರು ಹಾಗೂ ಉಪ ವಿಭಾಗ ಕಛೇರಿಗಳಿಗೆ 2024-25 ನೇ ಸಾಲಿಗೆ ಹೊರ ಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಸೇವಾ ಕೆಲಸಕ್ಕೆ ಶೇಕಡಾ (+)1.00% ಸೇವಾ ದರವನ್ನು ನಮೂದಿಸಿರುವ ಸೆಟ್ ಪ್ಲ್ಯಾನ್ ಕನ್ಸಲ್ಟೆನ್ಸಿ ಸರ್ವೀಸಸ್ ಪ್ರೈ.ಲಿ,ಬೆಂಗಳೂರು, ರವರ ಟೆಂಡರ್ ಅನ್ನು, ಟೆಂಡರ್ ದಾಸ್ತಾನುವೇಜುಗಳಲ್ಲಿನ ಅಂಶವನ್ನು, ಸೂಚನೆಗಳು, ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅನುಮೋದಿಸಿ ಅಂಗೀಕರಿಸಿದೆ.

ಕಾರ್ಯಪಾಲಕ ಇಂಜಿನಿಯರ್,
ರಾಷ್ಟ್ರೀಯ ಹೆದ್ದಾರಿ ವಿಭಾಗ,
ತುಮಕೂರು

Signature Not Verified
Digitally signed by SHIVAKUMAR
Date: 2024.12.31 11:52:31 IST
Location: eProcure-EPROC